# ಮೇಡ್ ಇನ್ ಫಾರಿನ್

ಜಗತ್ತಿನ ಇತರ ಭಾಗದ ಜನರಿಗೆ ಹೋಲಿಸಿದರೆ, ಭಾರತೀಯರಿಗೆ ವಿದೇಶಿ ವ್ಯಾಮೋಹ ತುಸು ಹೆಚ್ಚು ಎಂದೇ ಹೇಳಬೇಕು. ಬಹುಶಃ ಸತತ ಸಾವಿರಾರು ವರ್ಷಗಳ ವಿದೇಶಿ ಆಳ್ವಿಕೆ ಮತ್ತು ವಿದೇಶಿಗರ ಜೀವನ ಶೈಲಿಗಳ ಪ್ರಭಾವವೇ ಇದಕ್ಕೆ ಕಾರಣವಾಗಿರಬೇಕು. ಮೊದಲು ಆರ್ಯರು, ಅನಂತರ ಮುಸಲ್ಮಾನರು, ಆಮೇಲೆ ಯುರೋಪಿಯನ್ನರು ನಮ್ಮ ದೇಶವನ್ನು ಆಕ್ರಮಿಸಿ ನಮ್ಮನ್ನಾಳಿದರು. ಈ ಜನಾಂಗಗಳೆಲ್ಲ ನಾಗರಿಕತೆಯ ದೃಷ್ಟಿಯಿಂದ ಮತ್ತು ಮೈಬಣ್ಣದ ದೃಷ್ಟಿಯಿಂದ ಇಲ್ಲಿನ ಮೂಲ ನಿವಾಸಿಗಳಿಗಿಂತ ವಿಕಾಸ ಗೊಂಡಿದ್ದರು. ದೇವರು, ಧರ್ಮ, ರಾಜನೀತಿ, ನಗರ ನಿರ್ಮಾಣ ಮುಂತಾದ ವಿಷಯಗಳಲ್ಲಿ ಇಲ್ಲಿನ ಮೂಲನಿವಾಸಿಗಳಿಗಿಂತ ಅವರು ವಿಕಾಸಗೊಂಡಿದುದರ ಪರಿಣಾಮವಾಗಿ ಸಹಜವಾಗಿ ಇಲ್ಲಿನವರಿಗೆ ಆಕರ್ಷಕವಾಗಿ ಕಂಡಿರಬಹುದು. ಎತ್ತರವಾದ, ಕಣ್ಸೆಳೆಯುವ ಬಣ್ಣ ಮತ್ತು ಮೈಕಟ್ಟು ಇಲ್ಲಿನ ಮೂಲನಿವಾಸಿಗಳಿಗೆ ಅವರ ಬಗ್ಗೆ ಅಭಿಮಾನವನ್ನೂ, ತಮ್ಮ ಬಗ್ಗೆ ಕೀಳರಿಮೆಯನ್ನೂ ಮೂಡಿಸಿರಬಹುದು. ಈ ಭಾವನಾತ್ಮಕ ಕೀಳರಿಮೆ ಭಾರತೀಯರ ವಂಶವಾಹಿನಿಗಳಲ್ಲಿ ಎಷ್ಟರ ಮಟ್ಟಿಗೆ ರಕ್ತಗತವಾಗಿದೆಯೆಂದರೆ, ಇಂದಿಗೂ 'ವಿದೇಶಿ' ಎಂಬ ಪದ ಅವರಲ್ಲಿ ರೋಮಾಂಚನ ಉಂಟುಮಾಡುತ್ತದೆ.

ಆಧುನಿಕ ಮಾರುಕಟ್ಟೆ ಪ್ರಪಂಚವನ್ನು ಗಮನಿಸಿ. ಅದು ಪ್ರಕಟ ಮಾಡುವ ಬಗೆ ಬಗೆಯ ಚಿತ್ತಾಕರ್ಷಣೆಯ ಜಾಹೀರಾತುಗಳನ್ನು ಗಮನಿಸಿ. ತಮ್ಮ ಸರಕುಗಳ ಬಿಕರಿಯ ಉದ್ದೇಶದಿಂದ ಅವುಗಳನ್ನು ತೊಟ್ಟು ಉಟ್ಟು ಪ್ರದರ್ಶನ ಮಾಡಲು ವಿದೇಶಿ ಬೆಡಗಿಯರನ್ನೇ ಬಳಸುತ್ತಾರೆ. (ಈ ಅಂಶದಲ್ಲಿ ಇತ್ತೀಚೆಗೆ ಭಾರತೀಯ ಬೆಡಗಿಯರು ಕಾಣಿಸಿಕೊಳ್ಳುತ್ತಿರುವುದು ಒಂದು ಸಮಾಧಾನಕರವಾದ ಅಂಶ!) ಭಾರತೀಯ ಕಂಪನಿಗಳು ತಾವು ಮಾರಾಟ ಮಾಡುವ ಪೆನ್ನು, ವಾಹನ, ಅಡುಗೆಮನೆ ಉಪಕರಣ, ವಿದ್ಯುನ್ಮಾನ ಉಪಕರಣ ಮುಂತಾದ ಸರಕುಗಳನ್ನು ಜಾಹೀರಾತುಗೊಳಿಸುವ ಸಂದರ್ಭದಲ್ಲಿ ಇಂದಿಗೂ ಮರೆಯದೇ ಜರ್ಮನ್ ಟೆಕ್ನಾಲಜಿ, ಸ್ವಿಸ್ ಟೆಕ್ನಾಲಜಿ, ಕೊರಿಯನ್ ಟೆಕ್ನಾಲಜಿ, ಜಪಾನ್ ಟೆಕ್ನಾಲಜಿ– ಮುಂತಾದ ವಿದೇಶಿ ತಂತ್ರಗಾರಿಕೆಯ ಹೆಸರುಗಾರಿಕೆಯನ್ನು ಬಳಸಿ ಪ್ರಚಾರ ಮಾಡುತ್ತಿರುವುದನ್ನು ನಿತ್ಯ ನಮ್ಮ ಸಮೂಹ ಮಾಧ್ಯಮಗಳಲ್ಲಿ ಕಾಣುತ್ತೇವೆ. ಇದರ ಹಿಂದಿರುವ ಮುಖ್ಯ ಉದ್ದೇಶ– ವಿದೇಶಿ ತಂತ್ರಜ್ಞಾನ ನಮ್ಮ ದೇಶಿ ತಂತ್ರಜ್ಞಾನಕಿಂತ ಉತ್ತಮವೆಂದು ಹೇಳುವುದಕ್ಕಿಂತ ಮಿಗಿಲಾಗಿ ಭಾರತೀಯರ ಮನಸ್ಸಿನಲ್ಲಿರುವ ವಿದೇಶಿ ವ್ಯಾಮೋಹದ ಕೀಳರಿಮೆ ಪೂರಿತ ಮನಸ್ಸನ್ನು ಆಕ್ರಮಿಸಿಕೊಳ್ಳುವುದೇ ಆಗಿದೆ.

ಡಾ.ರಾಮಮನೋಹರ ಲೋಹಿಯಾ ಅವರು ಶತಶತಮಾನಗಳಿಂದ ನಮ್ಮ ವಂಶವಾಹಿನಿಗಳಲ್ಲಿ ರಕ್ತಗತವಾಗಿ ಹರಿದುಬಂದಿರುವ ವಿದೇಶಿ ಶ್ರೇಷ್ಠತಾ ಆರಾಧನಾ ಭಾವವು ನಮ್ಮ ಗುಲಾಮಿತನದ ಸಂಕೇತವೆಂದು ಪರಿಗಣಿಸುತ್ತಾರೆ. ನಮ್ಮನ್ನಾಳಿದ ವಿದೇಶಿಯರು ಎಲ್ಲಾ ವಿಷಯಗಳಲ್ಲಿ ನಮಗಿಂತಾ ಶ್ರೇಷ್ಠರಾಗಿರುವುದರಿಂದ– ನಮ್ಮಲ್ಲಿ ದೇಸಿ ಪ್ರಜ್ಞೆ ಜಾಗೃತವಾಗದೆ ಕೀಳರಿಮೆಯ ಕಾರಣದಿಂದ ಆಳುವ ಜನಾಂಗದ ಜ್ಞಾನ, ತಂತ್ರಜ್ಞಾನ, ಜೀವನಶೈಲಿ, ಮುಂತಾದವುಗಳನ್ನು ಅನುಕರಿಸಲು ತೊಡಗುತ್ತಾರೆ. ಈ ಕೀಳರಿಮೆಯ ಮನಸ್ಥಿತಿಯನ್ನು ಶಿಕ್ಷಣವು ನೀಗಿಸಿ ಸ್ವಂತ ವ್ಯಕ್ತಿತ್ವವನ್ನೂ, ರೂಪ ಆಕಾರಗಳನ್ನೂ ಮೂಡಿಸುವ ಸಾಧನವಾಗಿ ಕೆಲಸ ಮಾಡುತ್ತದೆ ಎಂದು ಗಾಂಧೀಜಿ ಹಾಗೂ ಡಾ. ಅಂಬೇಡ್ಕರ್ ತಮ್ಮ ಬರಹಗಳಲ್ಲಿ ವಿಶ್ಲೇಷಿಸಿದ್ದಾರೆ.

ನಮ್ಮ ದೇಶವಾಸಿಗಳಿಗೆ ಕೇವಲ ವಿದೇಶಿ ವಸ್ತುಗಳ ವ್ಯಾಮೋಹ ಮಾತ್ರವಲ್ಲ ವಿದೇಶದಲ್ಲಿ ನೆಲೆಸಿರುವ ಗಂಡೂ ಕೂಡ ಆಕರ್ಷಕನಾಗಿ, ಬೆಲೆಯುಳ್ಳವನಾಗಿ ಕಂಡು ಬಿಡುತ್ತಾನೆ! ಹಿಂದೆ ಮುಂದೆ ನೋಡದೆ ತಮ್ಮ ಮಗಳನ್ನು ವಾರ ಒಪ್ಪತ್ತರಲ್ಲೇ ಮದುವೆ ಮಾಡಿ ಕಳುಹಿಸಿ ಬಿಡುವ ಭಂಡ ಧೈರ್ಯವನ್ನೂ ಮೆರೆದುಬಿಡುತ್ತಾರೆ! ಇಂದು ಜಗತ್ತು ಒಂದು ಪುಟ್ಟ ಹಳ್ಳಿಯಾಗಿ ಹತ್ತಿರವಾಗುತ್ತಿದ್ದರೂ; ತಾನು, ತನ್ನದು, ತನ್ನ ಕುಟುಂಬ, ತನ್ನ ಊರು, ತನ್ನ ಭಾಷೆ ಮತ್ತು ತನ್ನ ದೇಶವೆಂಬ ಸ್ವಾಭಿಮಾನವೊಂದೇ ವ್ಯಕ್ತಿಯ ಭೌತಿಕ ಅಭಿವೃದ್ಧಿ ಮತ್ತು ಬೌದ್ಧಿಕ ವಿಕಾಸದ ಬೆಳವಣಿಗೆಯಾಗಲು ಸಾಧ್ಯವೆಂಬುದನ್ನು ಮರೆಯಬಾರದು.

■ **ಶಿಕಾಕು**

## ಮಾತೇ ಮುತ್ತು

★ ದೊಡ್ಡವರ ಸಣ್ಣತನ, ಡಿಗ್ರಿವಂತರ ಮೂರ್ಖತನ, ಅವಿದ್ಯಾವಂತರ ಜಾಣತನ, ಸನ್ಯಾಸಿಗಳ ಕಪಟ, ಸೂಳೆಯರ ನಿರ್ಮಲಚಿತ್ತ– ಇವೆಲ್ಲವೂ ನನ್ನ ಗುರುಗಳೇ!

–ಬೀಚಿ

★ ಅಸಂತುಷ್ಟನಾದವನಿಗೆ ಎಲ್ಲ ಕರ್ತವ್ಯವೂ ನೀರಸ ಅನ್ನಿಸುತ್ತದೆ. ಅವನಿಗೆ ಯಾವುದರಿಂದಲೂ ಸಂತೋಷ ಸಿಕ್ಕದು. ಆದ್ದರಿಂದ ಅವನ ಜೀವನದಲ್ಲಿ ಅಸಫಲತೆ ಸ್ವಾಭಾವಿಕ.

–ಸ್ವಾಮಿ ವಿವೇಕಾನಂದ

★ ವಿಧವೆಯರು ಅನಾಥರ ಜೀವನ ನಿರ್ವಹಣೆಗೆ ಕಟಿಬದ್ಧನಾಗಿ ನಿಲ್ಲುವವನು– ದಿನವಿಡೀ ಪ್ರಾರ್ಥನೆ, ಅಖಂಡ ಉಪವಾಸ ಮಾಡಿ ಭಗವಂತನ ಸೇವೆಯಲ್ಲಿ ನಿರತನಾದವನಿಗೆ ಸರಿಸಮನಾಗಿರುತ್ತಾನೆ.

–ಮಹಮ್ಮದ್ ಪೈಗಂಬರ್

★ ಸಂತೃಪ್ತಿಗೆ ಸಮನಾದ ಸಂಪತ್ತಿಲ್ಲ, ಸಹನೆಗೆ ಸಮನಾದ ಸದ್ಗುಣವಿಲ್ಲ.

–ಶಾರದಾದೇವಿ

★ ಉಪಕಾರ ಮಾಡಲು ಸುಳ್ಳಿನ ಜಾಲವನ್ನು ನೇಯಬೇಕಾದರೂ ಅದು ಆತ್ಮದ್ರೋಹವಲ್ಲ.

–ಪ್ರೇಮ್‌ಚಂದ್

★ ಪ್ರಜೆಗಳ ಹಿತಕ್ಕೆ ಮಾರಕವಾಗಿ ತನ್ನ ಬೇಳೆ ಬೇಯಿಸಿಕೊಳ್ಳುವ ರಾಜ ಅಥವಾ ಜನಪ್ರತಿನಿಧಿ ಎನಿಸಿಕೊಳ್ಳುವ ಶಾಸಕ ಹಾಗೂ ಸಂಸದರು ದರೋಡೆಕೋರರಿದ್ದಂತೆ.

–ದಯಾನಂದ ಸರಸ್ವತಿ

★ ಜೀವನದಲ್ಲಿ ಸವಲತ್ತು ಸಿಕ್ಕ ಕಾರಣಕ್ಕೆ ಸಂತೋಷ ಇರುವುದಿಲ್ಲ. ಆದರೆ ಉತ್ತಮ ಆತ್ಮಸಾಕ್ಷಿ, ಉತ್ತಮ ಆರೋಗ್ಯ ಮತ್ತು ಸ್ವಾತಂತ್ರ್ಯಗಳೇ ಸಂತೋಷದ ಮೂಲಗಳು.

–ಥಾಮಸ್ ಜೆಫರ್‌ಸನ್

★ ಕಲ್ಪನಾಶಕ್ತಿ ಪ್ರಕೃತಿದತ್ತವಾದದ್ದು. ಇದು ಕತ್ತಲಿನಲ್ಲಿ ಪ್ರಕಾಶ ನೀಡುತ್ತದೆ. ಬುದ್ಧಿ ಮತ್ತು ಚಿಂತನ ಮಿಶ್ರಿತ ಕಲ್ಪನೆ– ಭೌತಿಕ ಅನ್ವೇಷಣಕರ್ತದ ಅತ್ಯಂತ ಶಕ್ತಿಶಾಲಿ ಯಂತ್ರ.

–ಜೆ.ಟಿಂಡಲ್

★ ಸೂರ್ಯನ ಪ್ರಕಾಶ ನನಗೆ ಪ್ರಿಯವಾದದ್ದು. ಆ ಬೆಳಕಿನಲ್ಲಿ ನಾನು ಮುಂದೆ ನಡೆಯುತ್ತೇನೆ. ಸೂರ್ಯ ನನಗೆ ಪೂಜನೀಯ. ಹಾಗೆಂದು ನಾನು ಈ ಭೂಮಿ ಮೇಲೆ ಇರದೆ, ಅವನ ಬಳಿ ಹೋದರೆ ಸುಟ್ಟು ಭಸ್ಮವಾಗಿಬಿಡುತ್ತೇನೆ.

–ವಿನೋಬಾ ಭಾವೆ

★ ಹೆಚ್ಚು ದಿನ ಬದುಕುವುದಕ್ಕಿಂತ– ಬದುಕಿದ್ದ ಸಮಯದಲ್ಲಿ ಏನು ಸಾಧಿಸಿದ್ದೇವೆ ಎನ್ನುವುದು ಮುಖ್ಯ.

–ಬಿ.ಆರ್.ಅಂಬೇಡ್ಕರ್

★ ಜೀವನದಲ್ಲಿ ಒಳಿತನ್ನು ಸಾಧಿಸುವುದು ಕಷ್ಟ. ಆದರೆ ಕೆಟ್ಟದ್ದನ್ನು ಪಡೆಯುವುದು ಸುಲಭ.

–ಅನಕೃ

★ ತನ್ನ ರೊಟ್ಟಿಯನ್ನು ಇನ್ನೊಬ್ಬರೊಂದಿಗೆ ಹಂಚಿಕೊಂಡು ತಿನ್ನುವವನಿಗೆ, ಹಸಿವಿನ ಬಾಧೆ ಎಂದೂ ಇರುವುದಿಲ್ಲ.

–ತಿರುವಳ್ಳುವರ್

★ ಎಂಥದೇ ಪರಿಸ್ಥಿತಿಯಲ್ಲಿ ಇಲ್ಲದಿರುವ ವ್ಯಕ್ತಿಯ ಬಗ್ಗೆ ನಿಂದನೆಗೆ ಉತ್ಸಾಹ ತೋರಿಸಬಾರದು.

–ಪ್ರಾಪರ್ಟಿಯಸ್

★ ಅತ್ಯಾಚಾರ ಮಾಡಿದವನು ಮರೆತು ಬಿಡುತ್ತಾನೆ. ಆದರೆ ಅತ್ಯಾಚಾರಕ್ಕೆ ಒಳಗಾದವನು ಎಂದೂ ಮರೆಯಲಾರ. ಕೈಯಿಂದ ಲಾಠಿ ಚಾರಿದರೂ ಮನಸ್ಸಿನಲ್ಲಿ ದ್ವೇಷ ಗುಪ್ತಗಾಮಿನಿ ಆಗಿರುತ್ತದೆ.

–ರವೀಂದ್ರನಾಥ ಠಾಕೂರ್